**ಅಸಲು ದಾವೆ ಸಂಖ್ಯೆ -216/2023**
**ಪಿ.ಡಬ್ಲ್ಯೂ- 2**

**ದಿನಾಂಕ 15-07-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ.ಬಿ.ಆರ್.ಡಿ ವಕೀಲರಿಂದ ಪ್ರತಿವಾದಿ-1 ರಿಂದ 5 ಪರವಾಗಿ**

1.ವಾದಿ ನನ್ನ ಹೆಂಡತಿ. ವಾದಿ ಅಕ್ಕಲ ಹುಷಾರಿಯಲ್ಲಿ ಇದ್ದಾರೆ ಎಂದರೆ ಸರಿ. ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಏನಾದರೂ ತೊಂದರೆ ಇದೆಯಾ ಎಂದರೆ ನ್ಯಾಯಾಲಯದ ಸಮಯಕ್ಕೆ ಬಂದು ಸಾಕ್ಷಿ ನುಡಿಯಲು ಆಗುವುದಿಲ್ಲ ಎಂದು ಹೇಳುತ್ತಾರೆ. ಆ ಕುರಿತು ವಿಶೇಷ ಮೊಕ್ತಿಯಾರ ನಾಮೆಯಲ್ಲಿ ಬರೆಸಿದ್ದೀರಾ ಎಂದರೆ ಹೌದು ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಸಾಕ್ಷ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯನ್ನು ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ತಾವು ಸುಳ್ಳು ಮೊಕ್ತಿಯಾರ ನಾಮೆಯನ್ನು ತಯಾರಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2.ದಾವಾ ಸರ್ವೆ ನಂ.77/4 ಮತ್ತು 77/3 ಮತ್ತು ವಿಪಿಸಿ ಸಂಖ್ಯೆ 62 ಬಿ/2 ಇವು ಮೂಲತಃ ಗಂಗವ್ವ ಮಾಯಪ್ಪ ಗುರಪ್ಪನವರಗೆ ಸೇರಿದ ಆಸ್ತಿಗಳು ಎಂದರೆ ಸರಿ. ಗಂಗವ್ವ ಇವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಆಕೆಯ ಗಂಡ ದಿಃ30.11.2004 ರಂದು ತೀರಿಕೊಂಡ ಎಂದರೆ ಸರಿ. ಆದ್ದರಿಂದ ಗಂಗವ್ವ ಅವರನ್ನು ಅವರ ಜೀವಿತಾವಧಿಯಲ್ಲಿ ಲಕ್ಕವ್ವ ಅವರು ನೋಡಿಕೊಂಡರು ಎಂದರೆ ಸರಿ. ಆದ್ದರಿಂದ ಗಂಗವ್ವ ಮತ್ತು ಲಕ್ಕವ್ವ ಅವರ ನಡುವೆ ತಾಯಿ ಮಕ್ಕಳ ಸಂಬಂಧ ಬೆಳೆಯಿತು ಎಂದರೆ ಸರಿ. ಆದ್ದರಿಂದ ತನ್ನ ಜೀವಿತಾವಧಿಯಲ್ಲಿ ಗಂಗವ್ವ ಇವರು 2 ವ್ಯವಸಾಯದ ಜಮೀನು ಮತ್ತು ವಿಪಿಸಿ ಸಂಖ್ಯೆ 62 ಬಿ/2 ಮನೆಯನ್ನು ಲಕ್ಕವ್ವ ಅವರಿಗೆ ಮಾಡಿಕೊಟ್ಟರು ಎಂದರೆ ಸರಿಯಲ್ಲ. ಗಂಗವ್ವ ಅವರು ತೀರಿಕೊಂಡಾಗ ಸದರಿ ಮೇಲೆ ಹೇಳಿದ 3 ಹೇಳಿದ ಆಸ್ತಿಗಳು 1 ನೇ ಪ್ರತಿವಾದಿ ಲಕ್ಕವ್ವ ಅವರ ಹೆಸರಿನಲ್ಲಿ ಇದ್ದವು ಎಂದರೆ ಗಂಗವ್ವ ಅವರು ತೀರಿಕೊಂಡ ನಂತರ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ ಗಂಗವ್ವ ಅವರು ತೀರಿಕೊಂಡ ನಂತರ ವಾರಸಾ ನಾತೆಯಿಂದ ಲಕ್ಕವ್ವ ಅವರು ತಮ್ಮ ಹೆಸರು ಪಹಣಿ ಪತ್ರಿಕೆಗಳಲ್ಲಿ ದಾಖಲಿಸಿಕೊಂಡಿದ್ದಾರಾ ಎಂದರೆ ಆಕೆ ಹೇಗೆ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ಸಂಬಂಧಿಸಿದ ನೀವು ಯಾವುದೇ ದಾಖಲಾತಿಗಳನ್ನು ನೋಡಿಲ್ಲ ಎಂದರೆ ಸಾಕ್ಷಿ ಮೊದಲು ಇಲ್ಲ ಎಂದು ನುಡಿದು ನಂತರ ಭಕ್ಷಿಸ ಪತ್ರ ನೋಡಿದ್ದೇನೆ ಎಂದು ಹೇಳುತ್ತಾರೆ. ಸದರಿ ಭಕ್ಷಿಸ ಪತ್ರವನ್ನು ಹಾಜರಪಡಿಸಿದ್ದೇನೆ. ಆ ರೀತಿ ಹಾಜರಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3.ಮೇಲೆ ಹೇಳಿದ 3 ಆಸ್ತಿಗಳ ಮೂಲ ಮಾಲೀಕರಾದ ಗಂಗವ್ವ ಇವರು ಸತ್ಯಪ್ಪ ಅವರ ಖಾಸ ಸಹೋದರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಂಗಪ್ಪ, ಯಮನಪ್ಪ ಎಂಬ ಸಹೋದರರು ಎಂದು ಹೇಳುತ್ತಾರೆ. ಮೇಲೆ ಹೇಳಿದ 3 ಆಸ್ತಿಗಳು ಗಂಗವ್ವ ಅವರ ಗಂಡ ತೀರಿಕೊಂಡ ನಂತರ ಆಕೆಯ ಹೆಸರಿಗೆ ಬಂದವು ಎಂದರೆ ಸರಿ. ಆದ್ದರಿಂದ ಸದರಿ 3 ಆಸ್ತಿಗಳು ಮಾಯಪ್ಪ ಅವರಿಂದ ಗಂಗವ್ವ ಅವರಿಗೆ ಬಂದ ಆಸ್ತಿಗಳು ಎಂದರೆ ಸರಿ. ಆದ್ದರಿಂದ ಗಂಗವ್ವ ಅವರ 3 ಜನ ಸಹೋದರರಿಗೆ ಮೇಲೆ ಹೇಳಿದ 3 ಅಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿ.

4.ಲಕ್ಕವ್ವ ಅವರ ಗಂಡ ಹಣಮಂತ ಚಿಚಖಂಡಿ ಇವರು ಗಂಗವ್ವ ಅವರ ಸಹೋದರ ಸತ್ಯಪ್ಪ ಅವರ ಮಗ ಎಂದರೆ ಸರಿ. ಲಕ್ಕವ್ವ ಇವರು ಮೇಲೆ ಹೇಳಿದ 3 ಆಸ್ತಿಗಳನ್ನು 4 ನೇ ಪ್ರತಿವಾದಿ ಮುತ್ತಪ್ಪ ಅವರಿಗೆ ಭಕ್ಷಿಸ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಕೇವಲ ಆತನೊಬ್ಬನಿಗೆ ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಸದರಿ 3 ಆಸ್ತಿಗಳು ಹಣಮಂತ ಚಿಚಖಂಡಿ ಅವರಿಂದ ಬಂದ ಆಸ್ತಿಗಳಲ್ಲದ

ಕಾರಣ ವಾದಿಗಾಗಲೀ, ಪ್ರತಿವಾದಿ-2, 3 ಮತ್ತು 5 ರವರಿಗಾಗಲೀ ಸದರಿ 3 ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಗಂಗವ್ವ ಅವರಿಂದ ಲಕ್ಕವ್ವ ಅವರ ಹೆಸರಿಗೆ ಆಸ್ತಿ ಆಗುವ ಸಮಯದಲ್ಲಿ ಆಗಲೀ ಅಥವಾ ಲಕ್ಕವ್ವ ಅವರಿಂದ ಮುತ್ತಪ್ಪ ಅವರಿಗೆ ಆಸ್ತಿ ಬರುವ ಸಮಯದಲ್ಲಿಯಾಗಲೀ ತಾವು ಅಥವಾ ಉಳಿದ ಪ್ರತಿವಾದಿ ಯಾವುದೇ ತಕರಾರು ಮಾಡಿಲ್ಲ ಎಂದರೆ ಸಾಕ್ಷಿ ಗಂಗವ್ವ ಅವರಿಂದ ಲಕ್ಕವ್ವ ಅವರಿಗೆ ಬರಬೇಕಾದರೆ ಯಾವುದೇ ತಕರಾರು ಮಾಡಿಲ್ಲ, ಆದರೆ ಲಕ್ಕವ್ವ ಅವರಿಂದ ಮುತ್ತಪ್ಪ ಅವರಿಗೆ ಬರಬೇಕಾದರೆ ತಕರಾರು ಮಾಡಿದ್ದೇವೆ ಎಂದು ಹೇಳುತ್ತಾರೆ. ಯಾವ ಕಚೇರಿಯಲ್ಲಿ ತಕರಾರು ಮಾಡಿದ್ದೀರಿ ಎಂದರೆ 4 ನೇ ಪ್ರತಿವಾದಿಗೆ ಮೌಖಿಕವಾಗಿ ತಕರಾರು ಮಾಡಿದ್ದೇವೆ ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಹೆಂಡತಿ ಚಿನ್ನವ್ವ ಇವರಿಗೆ ಲಕ್ಕವ್ವ ಅವರು ಮತ್ತಪ್ಪ ಅವರಿಗೆ ಆಸ್ತಿ ಹಸ್ತಾಂತರ ಮಾಡುವುದಕ್ಕೆ ತಕರಾರು ಮಾಡಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ 3 ಆಸ್ತಿಗಳು ಹಣಮಂತ ಅವರಿಂದ ವಾರಸಾ ನಾತೆಯಿಂದ ಬರದ ಆಸ್ತಿ ಆದ ಕಾರಣ ವಾದಿಗೆ ಮತ್ತು ಉಳಿದ ಪ್ರತಿವಾದಿಗಳಿಗೆ ಅದರಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಗಂಗವ್ವ ಅವರು ತೀರಿಕೊಂಡ ನಂತರ ವಾದಿ ಮತ್ತು ಪ್ರತಿವಾದಿಗಳಾದ ನೀವೆಲ್ಲರೂ ದಾವಾ ಆಸ್ತಿಗಳ ಒಟ್ಟು ಸ್ವಾಧೀನಾನುಭವದಲ್ಲಿ ಇದ್ದೀರಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆ ರೀತಿ ಒಟ್ಟು ಸ್ವಾಧೀನದಲ್ಲಿ ಇದ್ದೀರಿ ಎಂದು ತೋರಿಸಲು ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

5.ನಿಮಗೆ ಮುತ್ತಪ್ಪ ಅವರ ಹೆಸರಿಗೆ ಆಸ್ತಿಗಳು ಆದ ವಿಷಯ ನಿಮ್ಮ ಪ್ರಕಾರ ಯಾವಾಗ ಗೊತ್ತಾಯಿತು ಎಂದರೆ ಪ್ರಕರಣ ಸಲ್ಲಿಸುವ ಸುಮಾರು 1 ತಿಂಗಳು ಮೊದಲು ಎಂದು ಹೇಳುತ್ತಾರೆ. 2021 ರಲ್ಲಿ ಸದರಿ ವಿಷಯ ತಮಗೆ ಗೊತ್ತಿದ್ದರೂ ಸಹ ನೀವು ಈಗ 4 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಸದರಿ ಭಕ್ಷಿಸ ಪತ್ರ ದಿಃ02.11.2021 ರಂದು ಆಗಿದ್ದು, ಅದಕ್ಕೆ ಬಿ.ಎಸ್.ಕೋರಡ್ಡಿ ಮತ್ತು ಇತರರು ಮಧ್ಯಸ್ಥಿಕೆಗಾರರು ಇದ್ದರು ಎಂದರೆ ಸರಿಯಲ್ಲ. ಲಕ್ಕವ್ವ ಅವರು ಸ್ವಖುಷಿಯಿಂದ ಸದರಿ ಭಕ್ಷಿಸ ಪತ್ರ ಮಾಡಿದ್ದಾರೆ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆಸ್ತಿ ಸಂಖ್ಯೆ 62 ಎ ಸಹ ಗಂಗವ್ವ ಅವರಿಗೆ ಸೇರಿದ್ದು ಅದನ್ನು ಅವರು ಲಕ್ಕವ್ವ ಅವರಿಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಆಸ್ತಿಯಲ್ಲಿ ವಾದಿಗೆ ಮತ್ತು ಉಳಿದ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಹೇಗಾದರೂ ಪಾಲು

ಪಡೆಯುವ ಉದ್ದೇಶದಿಂದ ತಾವು ತಮ್ಮ ಹೆಂಡತಿ ಕಡೆಯಿಂದ ಈ ಸುಳ್ಳು ದಾವೆ ಸಲ್ಲಿಸುವಂತೆ ಮಾಡಿ ಆಕೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ಸತ್ಯ ಸಂಗತಿ ಹೊರಬರುತ್ತದೆ ಎಂದು ಒಟಮೊಕ್ತಿಯಾರ ನಾಮೆ ಬರೆಯಿಸಿಕೊಂಡು, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ